100 (515) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ರಹಿತ ದುರ್ಬಲ ವರ್ಗದವರು ಸರ್ಕಾರ ಜಾಗದಲ್ಲಿ ಮನೆ ಕಟ್ಟಿ ವಾಸ್ತವ್ಯ ಇರುವವರಿಗೆ ನಿವೇಶನದ ಹಕ್ಕುಪತ್ರ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಆ ಜಾಗವನ್ನು ಸಕ್ರಮಗೊಳಿಸಲು ಅವಕಾಶ ಮಾಡಿಕೊಡಲಾಗುವುದೇ?

ಇ) ಅಕ್ರಮ ಸಕ್ರಮ ಯೋಜನೆಯು ಕೇವಲ ನಗರ ಪ್ರದೇಶಕ್ಕೆ ಅಥವಾ ತಾಲ್ಲೂಕು ಪಟ್ಟಣಕ್ಕೆ ಸಂಬಂಧಿಸಿದೆಯೆ (ವಿವರ ಒದಗಿಸುವುದು);

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ಸಿ ಪ್ರಕಾರ ಸರ್ಕಾರಿ ಜಮೀನುಗಳನ್ನು ದಿ: 14-4-1998ರ ಪೂರ್ವದಲ್ಲಿ ಮನೆ ಕಟ್ಟಿ ವಾಸ ಇರುವ ಬಡ ಕುಟುಂಬದವರಿಗೆ ಅಂತಹವರ ಅನಧಿಕೃತ ಮನೆಗಳನ್ನು ಸಕ್ರಮೀಕರಣಗೊಳಿಸಲು ದಿ: 31.12.2001 ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹತೆ ಅನುಸಾರ ಮಂಜೂರು ಮಾಡಿ ಹಕ್ಕು ಪತ್ರ ನೀಡಲು ಅವಕಾಶವಿದೆ.

ಇ) ಇದನ್ನು ನಗರ ಪ್ರದೇಶಕ್ಕೆ ಹಾಗೂ ತಾಲ್ಲೂಕು, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಕ್ಕೂ ಅನ್ವಯಿಸಲಾಗಿತ್ತು.

ರಾಜೀವ್‌ಗಾಂಧಿ ವಿದ್ಯುತ್ ಯೋಜನೆ

102 (48) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ., (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಕೊಡಗು ಜಿಲ್ಲೆಯಲ್ಲಿ ಯಾವ ಕಂಪನಿಗೆ ನೀಡಲಾಗಿದೆ?

ಆ) ಈ ಕಂಪನಿಯವರು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ನೀಡಲು ವಿಳಂಬ ಮಾಡಲು ಕಾರಣವೇನು?

ಇ) ಈ ಕಂಪನಿಗೆ ಕೊಡಗು ಜಿಲ್ಲೆಯಿಂದ ಎಷ್ಟು ಮೊತ್ತದ ಹಣ ನೀಡಲಾಗಿದೆ?

ಈ) ಕಾಮಗಾರಿ ಕೈಗೊಳ್ಳುವುದಕ್ಕಿಂತ ಮೊದಲು ಹಣ ಪಾವತಿಸಲು ಕಾರಣವೇನು?

ಉ) ಕಾಮಗಾರಿ ಮೇಲ್ವಿಚಾರಣೆ ಯಾರು ನೋಡಿಕೊಳ್ಳುತ್ತಿದ್ದಾರೆ?

ಊ) ಕೊಡಗು ಜಿಲ್ಲೆಯಲ್ಲಿ ಅಂದಾಜು ರೂ.13.00 ಕೋಟಿ ಪಾವತಿಯಾಗಿರುವ ಬಗ್ಗೆ ಸಾರ್ವಜನಿಕವಾಗಿ ಕೇಳಿ ಬರುತ್ತಿದೆ. ಇದಕ್ಕೆ ಸರ್ಕಾರದ ಸಮಜಾಯಿಷಿ ಏನು?

ಋ) ಕೊಡಗು ಜಿಲ್ಲೆಯಲ್ಲಿ ಆಗಿಂದಾಗ್ಗೆ ವಿದ್ಯುತ್ ಕಡಿತಗೊಳ್ಳಲು ಕಾರಣವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮೆ: ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು ಇವರಿಗೆ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ನೀಡಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಕೊಡಗು ಜಿಲ್ಲೆಗೆ ರಾಜೀವ್ ಗಾಂಧೀ ವಿದ್ಯುತ್ ಯೋಜನೆಯ ಮಂಜೂರಾತಿ ದೊರೆಯುವಲ್ಲಿ ವಿಳಂಬವಾದುದರಿಂದ ವಿದ್ಯುತ್ ಸಂಪರ್ಕ ಏರ್ಪಡಿಸುವ ಕಾಮಗಾರಿಯಲ್ಲಿ ವಿಳಂಬವಾಗಿರುತ್ತದೆ.

ಇ) ಕಂಪನಿಗೆ ನಿಯಮಾನುಸಾರವಾಗಿ ರೂ. 13.63 ಕೋಟಿಗಳನ್ನು ನೀಡಲಾಗಿರುತ್ತದೆ.

ಈ) ಟೆಂಡರ್ ಕಾಮಗಾರಿ ಕೈಗೊಳ್ಳುವುದಕ್ಕಿಂತ ಮೊದಲು ಕ್ರೋಢೀಕರಣ ಮುಂಗಡ (Mobilization Advance) ಹಣ ಪಾವತಿಸಬೇಕಾಗಿರುತ್ತದೆ.

ಉ) ಕಾಮಗಾರಿ ಮೇಲ್ವಿಚಾರಣೆಯನ್ನು ವಿದ್ಯುತ್ ಸರಬರಾಜು ಕಂಪನಿಯ ಆಯಾಯ ಜಿಲ್ಲೆಯ ವಿಭಾಗಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ.

ಊ) ಟೆಂಡರ್ ನಿಯಮದಂತೆ ಕಾಮಗಾರಿಯನ್ನು ಕೈಗೊಳ್ಳಲು ಕ್ರೋಢೀಕರಣ ಮುಂಗಡ (Mobilization Advance) ಹಣವನ್ನು ಸಾಮಗ್ರಿಗಳ ಖರೀದಿಗಾಗಿ ಹಾಗೂ ಇತರೆ ವೆಚ್ಚವನ್ನು ಭರಿಸಲು ಕಂಪನಿಯವರಿಗೆ ನೀಡಬೇಕಾಗಿರುತ್ತದೆ. ಆದುದರಿಂದ, ಮೇಲಿನ ಮೊಬಲಗನ್ನು ಪಾವತಿ ಮಾಡಲಾಗಿರುತ್ತದೆ.

ಋ) ವಿದ್ಯುತ್ ಜಾಲದ ತಾಂತ್ರಿಕ ದೋಷ ಹಾಗೂ ಅನಿಯಮಿತ ವಿದ್ಯುತ್ ಕಡಿತ ಹೊರತುಪಡಿಸಿ ವೇಳಾಪಟ್ಟಿಯಂತೆ ನಿಗಧಿತ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ವಿದ್ಯುತ್ ಸರಬರಾಜು

108 (423) ಶ್ರೀ ಬಚ್ಚೇಗೌಡ. ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ದಿನಕ್ಕೆ ಎಷ್ಟು ಗಂಟೆಗಳ ಕಾಲ 3 ಫೇಸ್ ಕರೆಂಟ್‌ನ್ನು ರೈತರ ಐ.ಪಿ.ಸೆಟ್‌ಗಳಿಗೆ ನೀಡಲಾಗುತ್ತಿದೆ (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು);

ಆ) ರಾಜ್ಯದಲ್ಲಿ ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ರೈತಾಪಿ ಜನಗಳ ಐ.ಪಿ.ಸೆಟ್ಟಿನ ಹಾಗೂ ಕುಡಿಯುವ ನೀರಿನ ಹಾಗೂ ಗ್ರಾಮಗಳ ಬೀದಿ ದೀಪಗಳ ಎಷ್ಟು ಟಿ.ಸಿ.ಗಳು ಹಾಳಾಗಿರುತ್ತವೆ?

ಇ) ಎಷ್ಟು ಟಿ.ಸಿ.ಗಳನ್ನು ಬದಲಾಯಿಸಬೇಕಾಗಿದೆ? ಅವುಗಳಲ್ಲಿ ಎಷ್ಟು ಸಾಮರ್ಥ್ಯದ ಟಿ.ಸಿ.ಗಳು ಚಾಲನೆಯಲ್ಲಿವೆ? ಸಾಮರ್ಥ್ಯವಾರು ಅವುಗಳನ್ನು ಅಳವಡಿಸಲು ಎಷ್ಟು ಕಾಲಾವಕಾಶ ತೆಗೆದುಕೊಳ್ಳಲಾಗುವುದು; (ಕಳೆದ 3 ವರ್ಷಗಳ ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು);

ಈ) ರಾಜ್ಯದಲ್ಲಿ ಬೆಂಗಳೂರು ವಿದ್ಯುತ್ ಕಂಪೆನಿ, ಮಂಗಳೂರು ವಿದ್ಯುತ್ ಕಂಪೆನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪೆನಿ, ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪೆನಿಗಳ ವ್ಯಾಪ್ತಿಗೆ ಬರುವ ಪರಿಶಿಷ್ಟ ಸಮಾಜ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಅಳವಡಿಸಿರುವ ಐ.ಪಿ.ಸೆಟ್ ಗಳೆಷ್ಟು; ಅವುಗಳಲ್ಲಿ ವಿದ್ಯುತ್ ಸಂಪರ್ಕವನ್ನು ಎಂದಿನಿಂದ ಕಲ್ಪಿಸಲಾಗಿರುತ್ತದೆ;